**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 25 ಪ್ರಾ.ಸಾ. : 20**

ಸಾಕ್ಷಿಯ ಹೆಸರು : ಅಶೋಕ
ತಂದೆಯ ಹೆಸರು : ವೆಂಕಟ್ರಾವ್ ಅಣ್ವೇಕರ
ವಯಸ್ಸು : 71 ವರ್ಷ
ಉದ್ಯೋಗ : ನಿವೃತ್ತ ಎ ಜಿ ಎಂ (ಆಡಳಿತ) , ಬಿ ಎಸ್ ಎನ್ ಎಲ್
ವಾಸ : ಅವರ್ಸಾ, ಅಂಕೋಲಾ

**ದಿನಾಂಕಃ 08-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2003 ರಿಂದ ಜನವರಿ 2012 ರವರೆಗೆ ಕಾರವಾರದಲ್ಲಿ ಬಿ ಎಸ್ ಎನ್ ಎಲ್ ಸಂಸ್ಥೆಯಲ್ಲಿ ಸಹಾಯಕ ಮಹಾ ಪ್ರಬಂಧಕ ಆಗಿ ಕೆಲಸ ಮಾಡುತ್ತಿದ್ದೆ. ದಿನಾಂಕ 21.12.2010 ರಂದು ಕಾರವಾರದ ಕರ್ನಾಟಕ ಲೋಕಾಯುಕ್ತ ಆರಕ್ಷಕ ನಿರೀಕ್ಷಕರು ಆರೋಪಿ ನರೇಂದ್ರ ಜಿ. ಹಿತ್ತಲಮಕ್ಕಿರವರ ಅಂಕೋಲಾದ ವಂದಿಗೆಯಲ್ಲಿ ಇರುವ ಮನೆಯಲ್ಲಿ ಅಳವಡಿಸಿರುವ ದೂರವಾಣಿ ಸಂಖ್ಯೆ 08388-231237 ರ ಸಂಪರ್ಕ ಯಾರ ಹೆಸರಿಗೆ ಇದೆ ಅದನ್ನು ಪಡೆಯಲು ಎಷ್ಟು ಮೊತ್ತ ತುಂಬಿದ್ದಾರೆ ಪ್ರಾರಂಭದಿಂದ ದಿನಾಂಕ 30.04.2010 ರವರೆಗೆ ಅದರ ಸಂಬಂಧದಲ್ಲಿ ಪಾವತಿಸಿರುವ ಬಿಲ್ಲಿನ ಮೊತ್ತದ ಬಗ್ಗೆ ದಾಖಲಾತಿ ಕೋರಿದ್ದರು. ಈಗ ಆ ಪತ್ರ ನೋಡಿರುತ್ತೇನೆ. ಆ ಪತ್ರವನ್ನು ನಿ.ಪಿ. 193 ಎಂದು ಗುರುತಿಸಲಾಯಿತು. ನಾನು ಆ ಮಾಹಿತಿಯನ್ನು ನಮ್ಮ ಕಚೇರಿಯ ಲೆಕ್ಕ ವಿಭಾಗದಿಂದ ಪಡೆದು ನನ್ನ ಪತ್ರದೊಂದಿಗೆ ಒದಗಿಸಿರುತ್ತೇನೆ. ಈಗ ನನ್ನ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ಆ ಪತ್ರವನ್ನು ನಿ.ಪಿ. 194 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 194(ಎ) ಎಂದು ಗುರುತಿಸಲಾಯಿತು. ನಾನು ಅದರೊಂದಿಗೆ ಲೆಕ್ಕಾಧಿಕಾರಿಯವರ ಪತ್ರ ಲಗತ್ತಿಸಿದ್ದೇನೆ ಹಾಗೂ ಅವರು ನೀಡಿದ ತಖ್ತೆಃ ಲಗತ್ತಿಸಿದ್ದೇನೆ. ಅದರಲ್ಲಿ ಲೆಕ್ಕಾಧಿಕಾರಿ ರುಜು ಮತ್ತು ಮೊಹರು ಇದೆ . ಆ ಪತ್ರವನ್ನು ನಿ.ಪಿ. 194/1 ಎಂದು ಗುರುತಿಸಲಾಯಿತು. ಲೆಕ್ಕಾಧಿಕಾರಿ ರುಜುವನ್ನು ನಿ.ಪಿ. 194/1(ಎ) ಎಂದು ಗುರುತಿಸಲಾಯಿತು. ಈಗ ಸದರಿ ಬಿಲ್ಲಿನ ವಿವರದ ದೃಢೀಕೃತ

ತಖ್ತೆಃಯನ್ನು ನೋಡಿರುತ್ತೇನೆ. ಅದಕ್ಕೆ ನಮ್ಮ ಲೆಕ್ಕ ವಿಭಾಗದ ಲೆಕ್ಕಾಧಿಕಾರಿಯವರು ಸಹಿ ಮಾಡಿದ್ದಾರೆ ಮತ್ತು ಮೊಹರು ಹಾಕಿದ್ದಾರೆ. ಈಗ ಸದರಿ ಲೆಕ್ಕಾಧಿಕಾರಿಯವರ ತಖ್ತೆಃಯನ್ನು ನಿ.ಪಿ. 194/2 ಎಂದು ಗುರುತಿಸಲಾಯಿತು. ಆ ತಖ್ತೆಃ ಮೂರು ಹಾಳೆ ಇದೆ . ಅದರಲ್ಲಿ ರುಜುಗಳನ್ನು ನಿ.ಪಿ. 194/2 ರಲ್ಲಿ ಕೊನೆಯ ಪುಟದಲ್ಲಿ ರುಜುವನ್ನು ನಿ.ಪಿ. 194/2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ**

2. ಮೇಲೆ ಹೇಳಿದ ದೂರವಾಣಿ ಸಂಪರ್ಕ ನಾಗೇಶ ಹೊನ್ನಪ್ಪ ಕೆರೆಮನೆ ಹೆಸರಿಗೆ ಇದೆ. ಸದರಿ ದೂರವಾಣಿ ಸಂಪರ್ಕಕ್ಕೆ ಮತ್ತು ಆರೋಪಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ ನಾಗೇಶ ಹೊನ್ನಪ್ಪ ಕೆರೆಮನೆ ಆರೋಪಿಯ ಮಾವ ಆಗಿರುತ್ತಾನೆ .

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ